

ನಮ್ಮ ಹೆಸರಾಂತ ವಿಮರ್ಶಕರ ಸಾಹಿತ್ಯ ಚಿಂತನೆಗಳ ತಾತ್ವಿಕ ಆಕಾರಗಳನ್ನು ಹುಡುಕುವ ಮತ್ತು ಅವುಗಳನ್ನು ತಕ್ಕಂತೆ ಪರಿಷ್ಕರಿಸಿಕೊಳ್ಳುವ ಪ್ರಯತ್ನಗಳೂ ನಡೆದಿಲ್ಲ. ಕುರ್ತಕೋಟಿ ಮತ್ತು ಡಿ.ಆರ್. ನಾಗರಾಜ್ ಅವರನ್ನೇ ತೆಗೆದುಕೊಳ್ಳಿ. ಅವರ ಪ್ರಖರ ತಿಳಿವಳಿಕೆಯನ್ನು ಬಳಸಿಕೊಳ್ಳುವ ಅವರ ಅನುಯಾಯಿಗಳನ್ನು ನಾವು ಕಾಣ್ತಿಲ್ಲ. ಅವರ ಮಾತು, ನಿಲುವು, ತೀರ್ಮಾನಗಳನ್ನು ಮಾತ್ರ ಬಳಸಿಕೊಳ್ತಾ ಇದ್ದೇವೆ. ಅವರ ಚಿಂತನೆಗಳ ಹಿಂದಿನ ತಾತ್ವಿಕ ಚೌಕಟ್ಟುಗಳನ್ನು ಕಂಡುಕೊಳ್ಳುವ ಮತ್ತು ಅವುಗಳೊಡನೆ ಮುಖಾಮುಖಿಯಾಗುವ ಕೆಲಸವನ್ನು ನಾವು ಮಾಡ್ತಿಲ್ಲ. ಡಿ.ಆರ್. ನಾಗರಾಜ್ ಅವರು ಮೆಟಾಫರಿಕಲ್ ಆಗಿ ಮಾತಾಡ್ತಾ ಇದ್ರು. ಬಹಳ ಕ್ಯಾಚಿ ಆಗಿರ್ತಿತ್ತದು. ಅದು ಅತಿರೇಕಕ್ಕೆ ಹೋದಾಗ ಅಪಾಯಗಳನ್ನೂ ಅನುಭವಿಸಿದ್ರು. ತಾತ್ವಿಕ ಚೌಕಟ್ಟುಗಳನ್ನು ಬಳಸುವಲ್ಲಿಯೂ ನಮ್ಮ ವಿಮರ್ಶೆ ಕೊಂಚ ದಾರಿತಪ್ಪಿದೆ. ಯಾವುದೋ ಒಂದು ಕೃತಿ, ಉದಾಹರಣೆಗೆ, ಶಾಂತಿನಾಥ ದೇಸಾಯಿ ಅವರ 'ಮುಕ್ತಿ' ಅಸ್ತಿತ್ವವಾದಿ ತಾತ್ವಿಕತೆಯನ್ನು ಹೊಂದಿದೆ ಅಂತ ಹೇಳಿದರೆ ಏನರ್ಥ. ಹೀಗೆ ಹೇಳುವ ವಿಮರ್ಶಕರಿಗೆ ಅಸ್ತಿತ್ವವಾದ ಎಂಬ ನಾಮಪದ ತಿಳಿದಿದೆ ಎಂಬುದಷ್ಟೇ ದಿಟ. ಅದರ ಕ್ರಿಯಾತ್ಮಕ ನೆಲೆಗಳು ನಮಗೆ ಕೃತಿಯಲ್ಲಿ ಗೋಚರಿಸುತ್ತವೆ ಎಂದಾದರೆ ಚರ್ಚೆ ಇನ್ನೊಂದು ದಿಕ್ಕಿಗೆ ಬೆಳೀತದೆ. ಅಸ್ತಿತ್ವವಾದವನ್ನು ಅರಿಯಲು ಕೃತಿ ನೆರವಾಗ್ತದೆ. ಕೃತಿಯೊಂದು ಸೃಜನಶೀಲವಾಗುವುದು ಈ ನೆಲೆಯಲ್ಲಿಯೇ ಅಲ್ಲವೆ. ಮಾರ್ಕ್ಸ್‌ವಾದ, ಸ್ತ್ರೀವಾದ ಹೀಗೆ ಯಾವುದೇ ಚಿಂತನೆಯ ಚೌಕಟ್ಟಿರಲಿ, ಅವುಗಳ ಮೂಲಕ ಕೃತಿಯನ್ನು ಅರಿಯುವುದಕ್ಕಿಂತ ಕೃತಿಗಳ ಮೂಲಕ ಆ ತಾತ್ವಿಕತೆಗಳ ಕ್ರಿಯಾಶೀಲತೆಯನ್ನು ಅರಿಯಬೇಕಲ್ಲವೆ? ಈ ಹಾದಿಯಲ್ಲಿ ನಮ್ಮ ವಿಮರ್ಶೆ ಸಾಗಿದ್ದು ಕಡಿಮೆ. ಜೊತೆಗೆ ನಮ್ಮ ಲೋಕ ಗ್ರಹಿಕೆಯ ವಿಧಾನಗಳು ನಮ್ಮ ಕಲಿಕೆಯಿಂದಾಗಿ ಮೊಂಡಾಗುತ್ತಿರುವುದರಿಂದ ಅದನ್ನು ಮತ್ತೆ ಹರಿತಗೊಳಿಸುವ, ಲೋಕವನ್ನು ಬೇರೊಂದು ರೀತಿಯಲ್ಲಿ ಗ್ರಹಿಸುವ ಬಗೆಯನ್ನು ಓದುಗರಿಗೆ ಸಾಹಿತ್ಯ ಕೃತಿಗಳು ಹೇಗೆ ಒದಗಿಸುತ್ತವೆ ಎಂಬುದನ್ನು ತಿಳಿಸುವ ಹೊಣೆ ವಿಮರ್ಶೆಗೆ ಇರಬೇಕು ಕೂಡ. ಇಂದಿನ ದಿನಮಾನಗಳಲ್ಲಿ ಇದು ಇನ್ನಷ್ಟು ಮುಖ್ಯವಾದ ಹೊಣೆ.

●